ಹಳಿಯುವಾಗಲೇ ಅನ್ವರನ ನೆನಪಾಗಿ ಪ್ರಾಜಕ್ತಾನ ಮುಖ ಖಾರ ಉಗ್ಗಿದಂತೆ ಕೆಂಪಾಯಿತು. ಯಾವಾಗ್ಲೂ ಅವಳು ಇಸ್ಮಾಯಿಲ್ ಚಾಚಾನ 'ನೂರ್ ಎ ಜಹಾನ್' ಮಿರ್ಚಿ ಅಂಗಡಿಗೆ ಬರುವಾಗ ಸಂಜೆಯ ಆರು ಗಂಟೆಯಾಗ್ತದೆ. ಆಗ ಅವ ಇದ್ದೇ ಇರ್ತಾನಲ್ಲಿ. ಸಂಜೆಯ ಗಾಳಿಗೆ ಫೋನ್ ಕೇಬಲ್‌ನವರು ಅರ್ಧಕ್ಕರ್ಧ ಕಡಿದು ಹಾಕಿರುವ ಅಂಗಡಿಯ ಬಲಗಡೆಯ ಆಲದಮರದ ಎಲೆಗಳು ಅಲ್ಲಾಡಿ ಚಹಾ ಕುಡಿಯುತ್ತಾ ನಿಂತ ಕೂಲಿಕಾರರ ರೆಪ್ಪೆಯಂಚಿನ ದೂಳಿನೊಂದಿಗೇನೇ ಗಂಟೆಗಟ್ಟಲೆ ಕೂತು ಬೆನ್ನಿಗಂಟಿದ ಆಫೀಸಿನ ಶರ್ಟುಗಳ ಬೆವರನ್ನೂ ತಂದು ಅವಳ ಮೂಗಿಗೊಡ್ಡುತ್ತವೆ. ಆಗ ಅವಳು ಕದ್ದು ಮುಚ್ಚಿ ಅನ್ವರನತ್ತ ನೋಡ್ತಾಳೆ. ಅವನಾದರೋ ತಲೆ ತಗ್ಗಿಸಿ ಅಪ್ಪ ಹೇಳುವ ಸಾಮಾನುಗಳ ಲಿಸ್ಟ್ ಬರೀತೀರ್ತಾನೆ. ನಿನ್ನೆಯೂ ಹಾಗೆಯೇ ಬರೆಯುತ್ತ ಕೂತವ ಸರಕ್ಕನೆ ಕೈ ಚಾಚಿ ಗಾಳಿಗಾಡುವ ಪ್ರಾಜಕ್ತಾಳ ಸ್ಪ್ರಿಂಗ್‌ನಂತಹ ಗುಂಗುರು ಕೂದಲಿನ ಸುರುಳಿಯೊಳಗೆ ಬಾಲ್ ಪಾಯಿಂಟ್ ತೂರಿಸಿ ಮತ್ತೆ ಎಳಕೊಂಡು 'ಮ್ಯಾಗಿ ಮ್ಯಾಗಿ...' ಅಂತ ಮೆಲ್ಲನುಸುರಿದಾಗ ನಾಚಿಗೆಯೊಟ್ಟಿಗೇ ಚಾಚಾನ ಕಣ್ತಪ್ಪಿಸಿ, ಅವ ಆಡಿದ ಎರಡು ಸೆಕೆಂಡಿನ ತುಂಟಾಟಕ್ಕೆ ಮೈ ಜುಮ್ಮೆಂದಿತ್ತವಳಿಗೆ. 'ಅಲ್ಲರ್ ಕಮೀಝು ಕರನಾ' ಬಾಯಲ್ಲಿನ ಮಾತುಗಳು ಹಿಂದುಮುಂದಾಗಿ ಒಳ್ಳೆ ಜಂಬಲ್ಡ್ ಶಬ್ದಗಳಂತೆ ಹೊರಬಿದ್ದಾಗ ತಾನೇ ಜೋರಾಗಿ ನಕ್ಕಿದ್ದಳು, ಅವಳ ಕೈಲಿದ್ದ ಪ್ಲಾಸ್ಟಿಕ್

